ಆ) ಇತ್ತೀಚಿನ ದಿನಗಳಲ್ಲಿ ಶೋಲಾ ಕಾಡುಗಳು ನಿರ್ನಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶೋಲಾ ಕಾಡುಗಳು ನಿರ್ವಾಮವಾಗುತ್ತಿರುವುದಕ್ಕೆ ಕಾರಣಗಳೇನು?

ಈ) ಶೋಲಾ ಕಾಡುಗಳೂ ಸೇರಿದಂತೆ ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳ ರಕ್ಷಣೆಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 4060.95 ಹೆಕ್ಟೇರ್

ಆ) ಕೆಲವು ಕಡೆ ಸ್ವಲ್ಪ ಮಟ್ಟಿಗೆ ಶೋಲಾ ಕಾಡುಗಳ ಮೇಲೆ ಒತ್ತಡವಿದೆ.

ಇ) ಬೆಂಕಿ ಮತ್ತು ಜಾನುವಾರುಗಳಿಂದ ಹಾವಳಿ ಮುಖ್ಯ ಕಾರಣಗಳಾಗಿರುತ್ತದೆ.

ಈ) ಬೆಂಕಿ ನಿಯಂತ್ರಣ ತಂಡಗಳನ್ನು ಸ್ಥಾಪಿಸಿ ಆ ಮೂಲಕ ಅರಣ್ಯಗಳನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಜಾನುವಾರುಗಳ ಹಾವಳಿಯನ್ನು ತಪ್ಪಿಸಲು ಸಿಬ್ಬಂದಿಯವರು ನಿಗಾವಹಿಸಿ ರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಕಂದಾಯ ಇಲಾಖೆಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ನೇಮಕಾತಿ

1994(2420) - ಶ್ರೀ ಸದಾನಂದ ಗೌಡ ಡಿ.ವಿ (ಪುತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಭೂಮಿ ಯೋಜನೆಯನ್ನು ಜಾರಿಗೆ ತಂದಿದ್ದು, ಯಾವಾಗ; ಈ ಯೋಜನೆಯ ಉದ್ದೇಶವೇನು;

ಆ) ಈ ಯೋಜನೆಯು ನಿರೀಕ್ಷಿತ ಯಶಸ್ಸನ್ನು ಗಳಿಸಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

ಇ) ಈ ಯೋಜನೆಯಡಿ ಎಷ್ಟು ಜನ ಕಂಪ್ಯೂಟರ್ ಆಪರೇಟರ್‌ಗಳನ್ನು ಯಾವ ಮಾನದಂಡದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿತ್ತು; ಅವರು ನಿರ್ವಹಿಸುತ್ತಿದ್ದ ಕೆಲಸಗಳೇನು;

ಈ) ಈಗ ಕಂಪ್ಯೂಟರ್ ಆಪರೇಟರ್‌ಗಳನ್ನು ಸೇವೆಯಿಂದ ವಜಾ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಕಾರಣಗಳೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 1998ನೇ ಸಾಲಿನಲ್ಲಿ ಪರಿಷ್ಕೃತ ರೂಪು ರೇಷೆಗಳೊಂದಿಗೆ ಭೂಮಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಉದ್ದೇಶಗಳು ಈ ರೀತಿ ಇದೆ.

1) ಭೂ ದಾಖಲೆಗಳನ್ನು ಸುಲಭವಾಗಿ ಸಮರ್ಥಿಸುವ ಸಲುವಾಗಿ
ನೀರಾವರಿ : ಪ್ರಕೃತಿ ವಿಕೋಪಗಳ ಕ್ರೋಡೀಕರಣ
ಮಾಲಿಕತ್ವದ ವರ್ಗಾವಣೆ

2) ಭೂ ದಾಖಲೆಗಳನ್ನು ಆಮೂಲಗ್ರವಾಗಿ ಅಂತ:ಕ್ಷೇತ್ರ ಮಾಡದಿರುವ ರೀತಿಯಲ್ಲಿ

3) ಅಭಿವೃದ್ಧಿ ಯೋಜನೆಗಳಿಗೆ ಬೇಕಾಗಿರುವ ಮಾಹಿತಿ ಭೂಮಿಯ ವಿಸ್ತರಣೆಯನ್ನು ಒದಗಿಸುವ ಬಗ್ಗೆ.

4) ವಾರ್ಷಿಕವಾಗಿ ಯಾಂತ್ರಿಕವಾಗಿ ಭೂ ಕಂದಾಯ ಮಾಹಿತಿ ಬೆಳೆಗಳ ಪದ್ಧತಿಯ ತಂರಲ್ ಗೊಳಿಸುವಿಕೆ

5) ಭೂಮಿಯ ಬಗ್ಗೆ ನಾನಾ ತರಹದ ಮಾಪನ ಹಾಗೂ ವಿಶಿಷ್ಟ ಉದ್ದೇಶಕ್ಕಾಗಿ ದಾಖಲಿಸುವುದು.

ಅ) ಹೌದು.

ಇ) ಸರ್ಕಾರವು ಯಾವುದೇ ಕಂಪ್ಯೂಟರ್ ಆಪರೇಟರ್‌ಗಳನ್ನು ನೇಮಕ ಮಾಡಿಕೊಂಡಿರುವುದಿಲ್ಲ. ಡಾಟಾ ಬೇಸ್‌ನ ನಿರ್ವಹಣೆಗಾಗಿ ಡಾಟಾ ಎಂಟ್ರಿ ಏಜೆನ್ಸಿಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಉಪಯೋಗಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿತ್ತು.

ಈ) ಅನ್ವಯಿಸುವುದಿಲ್ಲ.

ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವುದು

1995(2451) - ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಹಾಗಿದ್ದರೆ, ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸಿ ಇದರ ಅಭಿವೃದ್ಧಿಗೆ ಕೈಗೊಳ್ಳುವ ಕ್ರಮವೇನು.

ಆ) ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವಲ್ಲಿ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿರುವುದು ನಿಜವಲ್ಲವೆ

ಇ) ಹುಂಡೇಕರ್ ವರದಿಯಲ್ಲಿ ಹಲವಾರು ತಾರತಮ್ಯವಿದ್ದರೂ ಸಹ ಇದೇ ವರದಿ ಸರಿ ಎನ್ನುತ್ತಾ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಮಾಡದೇ ವಿಳಂಬ ಮಾಡುತ್ತಿರುವುದು ನಿಜವಲ್ಲವೆ

ಈ) ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸಿ ಈ ಭಾಗದ ಜನತೆಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿನ ಜಿಲ್ಲೆಗಳನ್ನು ಪುನರ್ ರಚನೆ ಮಾಡಲು ಸಾಧಕಬಾಧಕಗಳನ್ನು ಪರಿಶೀಲಿಸಲು 3 ಸಮಿತಿಗಳನ್ನು ನೇಮಿಸಲಾಗಿತ್ತು. ಈ ಮೂರು ಸಮಿತಿಗಳ ವರದಿಯಲ್ಲಿ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಬಗ್ಗೆ ಶಿಫಾರಸ್ಸು ಮಾಡಿರುವುದಿಲ್ಲ. ಅಲ್ಲದೆ, ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸಲು ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ) ಇ) ಈ) ಉದ್ಭವಿಸುವುದಿಲ್ಲ.

ಬಾಗೇಪಲ್ಲಿ ಕ್ಷೇತ್ರದ ಲೋಕೋಪಯೋಗಿ ಇಲಾಖೆಯಲ್ಲಿನ ಕಟ್ಟಡಗಳು ಹಾಗೂ ರಸ್ತೆಗಳ ಕುರಿತು

1996(2452) - ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?